ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2009-10ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ವೈದ್ಯಕೀಯ, ಇಂಜೀನಿಯರ್, ತಾಂತ್ರಿಕ, ಕೃಷಿ, ಪಶುವೈದ್ಯಕೀಯ, ಕಾನೂನು ಮುಂತಾದ ವೃತ್ತಿಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಗಾಗಿ ಪುಸ್ತಕ ಬಂಡಾರ ಸ್ಥಾಪಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ಎಲ್/20014/14/2007, ದಿನಾಂಕ:29-09-2011.
2) ಸರ್ಕಾರದ ಆದೇಶ ಸಂಖ್ಯೆ: ಸಕಇ 140 ಪವಯೋ 2012, ದಿನಾಂಕ:04-08-2012
3) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಇವರ ಏಕಕಡತ ಸಂಖ್ಯೆ: ಪವಕನಿ/ಇಡಿ-2/ಸಿಆರ್-74/2012-13, ದಿನಾಂಕ:17-09-2012.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕೇಂದ್ರ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು 2011-12ನೇ ಸಾಲಿಗೆ ಕೇಂದ್ರ ಪುರಸ್ಕೃತ ಯೋಜನೆಯಡಿ ವೈದ್ಯಕೀಯ, ದಂತವೈದ್ಯಕೀಯ, ಇಂಜೀನಿಯರಿಂಗ್, ತಾಂತ್ರಿಕ, ಕೃಷಿ, ಪಶುವೈದ್ಯಕೀಯ, ಕಾನೂನು ಮುಂತಾದ ವೃತ್ತಿಪರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಗಾಗಿ ಪುಸ್ತಕ ಭಂಡಾರ ಸ್ಥಾಪಿಸಲು ಕೇಂದ್ರದ ಪಾಲು ರೂ.3302.11 ಲಕ್ಷ ಮಂಜೂರು ಮಾಡಿದ್ದು, ಈ ಮೊತ್ತವು ದಿನಾಂಕ: 30-09-2011ರಂದು ರಾಜ್ಯ ಸರ್ಕಾರದ ಖಾತೆಗೆ ಜಮೆಯಾಗಿರುತ್ತದೆ.

ಈ ಪೈಕಿ ಮೇಲೆ ಓದಲಾದ ಕ್ರಮಸಂಖ್ಯೆ(2)ರಲ್ಲಿನ ಸರ್ಕಾರದ ಆದೇಶದಲ್ಲಿ 2012-13ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋನೆಯಡಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ವಿನಿಯೋಗಿಸಲು ರೂ.3268.80 ಲಕ್ಷಗಳನ್ನು ಅಂತಿಮ ಕಂತಾಗಿ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿರುತ್ತದೆ.

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಇವರು ಮೇಲೆ (3)ರಲ್ಲಿ ಓದಲಾದ ಏಕಕಡತದಲ್ಲಿ 2012-13ನೇ ಸಾಲಿನ ಜಿಲ್ಲಾವಲಯ ಆಯವ್ಯಯ ಲೆಕ್ಕ ಶೀರ್ಷಿಕೆ:2225-00-102-0-08(2225-02-196-6-01) ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಸದರಿ ಕಾರ್ಯಕ್ರಮದ ಅನುಷ್ಟಾನಕ್ಕಾಗಿ ನಿಗದಿಪಡಿಸಿರುವ ರೂ.69.32 ಲಕ್ಷಗಳಲ್ಲಿ ಪ್ರಸ್ತುತ ರಾಜ್ಯದ ಪಾಲು ರೂ.33.31 ಲಕ್ಷ ಹಾಗೂ ಕೇಂದ್ರದ ಪಾಲು ರೂ.33.31 ಲಕ್ಷ ಒಟ್ಟು ರೂ.66.62ಲಕ್ಷಗಳನ್ನು ಅನುಬಂಧದಲ್ಲಿರುವ ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಇವರಿಗೆ ಬಿಡುಗಡೆ ಮಾಡಲು ಕೋರಿರುತ್ತಾರೆ.

ಸದರಿ ಪ್ರಸ್ತಾವನೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 210 ಪವಯೋ 2012, ಬೆಂಗಳೂರು ದಿನಾಂಕ:15-03-2013**

2012-13ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ವೈದ್ಯಕೀಯ, ದಂತವೈದ್ಯಕೀಯ,

ಇಂಜಿನಿಯರಿಂಗ್, ತಾಂತ್ರಿಕ, ಕೃಷಿ, ಪಶುವೈದ್ಯಕೀಯ, ಕಾನೂನು ಮುಂತಾದ ವೃತ್ತಿಪರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾಥಿಗಳಿಗಾಗಿ ಪುಸ್ತಕ ಭಂಡಾರ ಸ್ಥಾಪಿಸಲು ಕೇಂದ್ರದ ಪಾಲು ರೂ.33.31 ಲಕ್ಷಗಳು ಹಾಗೂ ರಾಜ್ಯದ ಪಾಲು ರೂ.33.31ಲಕ್ಷಗಳು ಒಟ್ಟು 66.62 ಲಕ್ಷಗಳನ್ನು(ಒಟ್ಟು ರೂ. ಅರವತ್ತಾರು ಲಕ್ಷದ ಅರವತ್ತಾರು ಸಾವಿರಗಳು) ಅನುಬಂಧದಲ್ಲಿರುವಂತೆ ಆಯಾಯ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಆ ಸಂಬಂಧದ ವೆಚ್ಚವನ್ನು 2012-13ನೇ ಸಾಲಿನ ಜಿಲ್ಲಾ ವಲಯ ಯೋಜನಾ ಲೆಕ್ಕಶೀರ್ಷಿಕೆ 2225-00-102-0-08(2225-02-196-6-01)ರಡಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 04ಟಿಎಫ್‌ಪಿ2012, ದಿನಾಂಕ: 27-06-2012 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1, ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಕೃಷಿಭವನ, ಬೆಂಗಳೂರು.
3) ಸಂಬಂಧಿಸಿದ ಜಿಲ್ಲಾಧಿಕಾರಿಗಳು.
4) ಸಂಬಂಧಿಸಿದ ಜಿಲ್ಲಾಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು.
5) ಸಂಬಂಧಿಸಿದ ಜಿಲ್ಲಾ ಖಜಾನಾಧಿಕಾರಿಗಳು

(3–5: ನಿರ್ದೇಶಕರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಮುಖಾಂತರ)

6) ಉಪ ನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಶಾಖಾ ರಕ್ಷ ಕಡತ.
9) ಹೆಚ್ಚುವರಿ ಪ್ರತಿ-03.

## ಅನುಬಂಧ

ಸಕಇ;210;ಪವಯೋ;2012 ದಿನಾಂಕ:15.03.2013

2012-13ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ವೈದ್ಯಕೀಯ, ದಂತ ವೈದ್ಯಕೀಯ, ಪಶು ವೈದ್ಯಕೀಯ, ಇಂಜಿನಿಯರಿಂಗ್, ಕೃಷಿ, ಕಾನೂನು ಮುಂತಾದ ವೃತ್ತಿಪರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರ ಸ್ಥಾಪಿಸಲು ಜಿಲ್ಲಾವಾರು ಬಿಡುಗಡೆ ಮಾಡಿದ ರಾಜ್ಯದ ಹಾಗೂ ಕೇಂದ್ರದ ಪಾಲಿನ ಅನುದಾನ

ಲೆಕ್ಕಶೀರ್ಷಿಕೆ:2225-00-102-0-08

| ಅಬ್ಜೆಕ್ಟೀವ್ 'ಕೋಡ್ | ಜಿಲ್ಲೆಯ ಹೆಸರು | ಬಿಡುಗಡೆ ಮಾಡಬೇಕಾದ ಅನುದಾನ (ರೂ.ಲಕ್ಷಗಳಲ್ಲಿ) | | |
|---|---|---|---|---|
| | | ರಾಜ್ಯದ ಪಾಲು | ಕೇಂದ್ರದ ಪಾಲು | ಒಟ್ಟು |
| 401 | ಬೆಂಗಳೂರು (ನ) | 6.15 | 6.15 | 12.30 |
| 402 | ಬೆಂಗಳೂರು (ಗ್ರಾ) | 1.00 | 1.00 | 2.00 |
| 404 | ಕೋಲಾರ | 0.60 | 0.60 | 1.20 |
| 405 | ಶಿವಮೊಗ್ಗ | 3.00 | 3.00 | 6.00 |
| 406 | ತುಮಕೂರು | 4.00 | 4.00 | 8.00 |
| 407 | ಮೈಸೂರು | 1.50 | 1.50 | 3.00 |
| 408 | ಚಿಕ್ಕಮಗಳೂರು | 0.35 | 0.35 | 0.70 |
| 409 | ದಕ್ಷಿಣ ಕನ್ನಡ | 2.00 | 2.00 | 4.00 |
| 410 | ಹಾಸನ | 2.50 | 2.50 | 5.00 |
| 411 | ಕೊಡಗು | 1.00 | 1.00 | 2.00 |
| 412 | ಮಂಡ್ಯ | 0.50 | 0.50 | 1.00 |
| 413 | ಬೆಳಗಾವಿ | 1.00 | 1.00 | 2.00 |
| 414 | ಬಿಜಾಪುರ | 1.00 | 1.00 | 2.00 |
| 415 | ದಾರವಾಡ | 0.50 | 0.50 | 1.00 |
| 417 | ಗುಲ್ಬರ್ಗಾ | 0.76 | 0.76 | 1.52 |
| 418 | ಬಳ್ಳಾರಿ | 0.50 | 0.50 | 1.00 |
| 419 | ಬೀದರ್ | 1.00 | 1.00 | 2.00 |
| 420 | ರಾಯಚೂರು | 1.00 | 1.00 | 2.00 |
| 421 | ಯಾದಗೀರ್ | 0.25 | 0.25 | 0.50 |
| 451 | ದಾವಣಗೆರೆ | 1.00 | 1.00 | 2.00 |
| 452 | ರಾಮನಗರ | 1.00 | 1.00 | 2.00 |
| 453 | ಚಿಕ್ಕಬಳ್ಳಾಪುರ | 1.00 | 1.00 | 2.00 |
| 457 | ಉಡುಪಿ | 0.20 | 0.20 | 0.40 |
| 461 | ಬಾಗಲಕೋಟೆ | 0.25 | 0.25 | 0.50 |
| 462 | ಗದಗ್ | 0.25 | 0.25 | 0.50 |
| 463 | ಹಾವೇರಿ | 0.50 | 0.50 | 1.00 |
| 466 | ಕೊಪ್ಪಳ | 0.50 | 0.50 | 1.00 |
| | ಒಟ್ಟು | 33.31 | 33.31 | 66.62 |

(ಅರವತ್ತಾರು ಲಕ್ಷದ ಅರವತ್ತೆರಡು ಸಾವಿರ ರೂಪಾಯಿಗಳು ಮಾತ್ರ)

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ